# ಮೂರನೇ ಬೌದ್ಧ ಸಂಗಾಯನ

ಚಕ್ರವರ್ತಿ ಅಶೋಕನ ಅಧಿಪತ್ಯದಲ್ಲಿ ಮೂರನೇ ಬೌದ್ಧ ಸಂಗಾಯನ ಅಥವಾ ಸಂಗೀತಿ (council) ಕ್ರಿ.ಪೂ.241ರಲ್ಲಿ ಪಾಟಲೀಪುತ್ರದ ಅಶೋಕಾರಾಮದಲ್ಲಿ ಆತನ ಗುರು, ಹಿರಿಯ ಭಿಕ್ಕು ಮೊಗ್ಗಲಿಪುತ್ತ ತಿಸ್ಸರ ನೇತೃತ್ವದಲ್ಲಿ ನಡೆಯಿತು. ಈ ಸಂಗಾಯನಕ್ಕೆ ಮೂರು ಮುಖ್ಯ ಉದ್ದೇಶಗಳಿದ್ದವು. ಒಂದು ಸಂಘದಲ್ಲಿ ಬೆರೆತುಹೋಗಿದ್ದ ಕಪಟ ಸನ್ಯಾಸಿಗಳನ್ನು ಗುರುತಿಸಿ ಕಾಷಾಯವನ್ನು ಕಿತ್ತುಕೊಳ್ಳುವುದು, ಎರಡು; ಮೂಲ ಬೌದ್ಧ ತತ್ವಗಳನ್ನು ಬೋಧಿಸುತ್ತಲೇ ಕೆಲವು ಸಂಪ್ರದಾಯಗಳನ್ನು ಅಳವಡಿಸಿಕೊಂಡಿದ್ದ, ಮೌಢ್ಯಾಚರಣೆಗಳಲ್ಲಿ ತೊಡಗಿದ್ದ, ತಮ್ಮನ್ನು ಮಹಾಸಾಂಘಿಕರೆಂದು ಕರೆದುಕೊಳ್ಳುತ್ತಿದ್ದ ಕೆಲವರನ್ನು ಬಿಡುಗಡೆಗೊಳಿಸುವುದು ಮತ್ತು ಮೂರು; ಸಂಘಕ್ಕೆ ಒಳನುಸುಳಿದ್ದ ಭ್ರಷ್ಟಾಚಾರವನ್ನು ತೊಡೆದು ಹಾಕುವುದು. (ಬುದ್ಧನ ಪರಿನಿರ್ವಾಣದ ಸದ್ಯ ಕಾಲದಲ್ಲಿಯೆ ರಾಜಗೃಹದಲ್ಲಿ ಮೊದಲನೆಯ, ನೂರು ವರ್ಷಗಳ ನಂತರ ವೈಶಾಲಿಯಲ್ಲಿ ಎರಡನೆಯ ಸಂಗೀತಿಗಳು ನಡೆದವು).

ಅಶೋಕ ಬೌದ್ಧ ಧರ್ಮವನ್ನು ಅಪ್ಪಿಕೊಂಡ ಮೇಲೆ ಧಮ್ಮ, ಸಂಘಗಳ ಬಗ್ಗೆ ಅತ್ಯಂತ ಕಾಳಜಿವಹಿಸಿದ್ದ ಮತ್ತು ಇತರ ಧರ್ಮಗಳನ್ನೂ ಗೌರವಿಸುತ್ತಿದ್ದ. ಸಂಘವನ್ನು ಸೇರುತ್ತಿದ್ದ ಭಿಕ್ಕುಗಳಿಗೆ ಯಥೇಚ್ಛವಾಗಿ ದಾನ ದತ್ತಿಗಳನ್ನು, ಔಷಧಿಗಳನ್ನು, ಉಡುಗೊರೆಗಳನ್ನು ನೀಡುತ್ತಿದ್ದ. ಇದರ ಪ್ರಯೋಜನ ಪಡೆಯಲೆಂದು ಕೆಲ ಸಾಮಾನ್ಯರು, ಲೋಭಿಗಳು, ಧಮ್ಮವಿರೋಧಿಗಳು ಸಂಘವನ್ನು ಸೇರುತ್ತಿದ್ದರು. ಚಕ್ರವರ್ತಿಯ ಉದಾರತೆ ಗಂಭೀರ ಸಮಸ್ಯೆಯನ್ನು ತಂದೊಡ್ಡಿತು. ಒಮ್ಮೆ ನಿಗ್ರೋಧನೆಂಬ ಶ್ರಮಣ ಭಿಕ್ಕುವು ಧಮ್ಮಪದದ ಅಪ್ಪಮಾದ (ಎಚ್ಚರಿಕೆಯ) ಸೂತ್ರಗಳನ್ನು ಬೋಧಿಸಿದ ನಂತರ ಅಶೋಕ ಬದಲಾದ. ಇತರ ಧರ್ಮಗಳ ಬಗ್ಗೆ ಎಚ್ಚರಿಕೆ ವಹಿಸಿದ. ಧಮ್ಮವನ್ನು, ಸಂಘವನ್ನು ಶುದ್ಧೀಕರಿಸುವ ಸಂಕಲ್ಪಮಾಡಿದ. ಹೀಗೆ ಮೂರನೇ ಸಂಗಾಯನದ ಏರ್ಪಾಡಾಯಿತು.

ಥೇರ ಮೊಗ್ಗಲಿಪುತ್ತ ತಿಸ್ಸರ ಅಧ್ಯಕ್ಷತೆಯಲ್ಲಿ ಸಂಗಾಯನ ಪ್ರಾರಂಭವಾಯಿತು. ಆಯ್ದ ಒಂದು ಸಾವಿರ ಭಿಕ್ಕುಗಳು ಪರೀಕ್ಷಕರಾಗಿ ನೇಮಕವಾದರು. ಧಮ್ಮ, ವಿನಯಗಳ ಪಠಣ ನಡೆಯಿತು. ಸ್ವತಃ ರಾಜನೇ ಒಂದು ಸನ್ಯಾಸಿಗಳನ್ನು ವೈಯಕ್ತಿಕವಾಗಿ ಸಂದರ್ಶಿಸುತ್ತಿದ್ದನು. ಹಿರಿಯ ಭಿಕ್ಕುಗಳು ತಮ್ಮ ಪ್ರಶ್ನಾವಳಿಗಳಿಂದ (ಹುಸಿ) ಪರಿವ್ರಾಜಕರನ್ನು ಧಮ್ಮದ ನಿಕಷಕ್ಕೆ ಒಡ್ಡಿದರು. ಒಂಭತ್ತು ತಿಂಗಳು ನಡೆದ ಆ ಮಹಾಗೋಷ್ಠಿಯಲ್ಲಿ ಆರ್ಯಾವರ್ತದ ನಾನಾ ವಿಹಾರಗಳಿಂದ ಬಂದಿದ್ದ ಸುಮಾರು 60,000 ಪಾಷಂಡಿಗಳನ್ನು ಗುರುತಿಸಿ, ಕಾಷಾಯ ವಸ್ತ್ರ ಕಳಚಿ ಬಿಳಿ ಬಟ್ಟೆಗಳನ್ನು ಕೊಡಲಾಯಿತು. ಅಷ್ಟೆ ಅಲ್ಲ, ಅವರಿಗೆ ಗೃಹಸ್ಥ ಉಪಾಸಕ ಜೀವನ ಸಾಗಿಸುವ ಉಪದೇಶದೊಂದಿಗೆ ಉಂಬಳಿಯನ್ನೂ ನೀಡಿ ಕಳಿಸಿಕೊಡಲಾಯಿತು.

ಬೌದ್ಧ ಇತಿಹಾಸದಲ್ಲಿ ಇದೊಂದು ಮುಖ್ಯವಾದ ಘಟ್ಟ ಎಂದು ಗುರುತಿಸುತ್ತಾರೆ ಏಕೆಂದರೆ ಪಾಲಿ ತ್ರಿಪಿಟಕ ಸಾಹಿತ್ಯ ಒಂದು ನಿರ್ದಿಷ್ಟ ರೂಪ ಪಡೆದುಕೊಂಡದ್ದು ಈ ಸಂಗಾಯನದ ನಂತರವೆ. ಇದನ್ನು ಪ್ರಪ್ರಥಮ ಬಾರಿಗೆ ಬರವಣಿಗೆಗೆ ಇಳಿಸಿದ್ದು ಆಗಲೇ ಎಂದು ಹೇಳುವುದುಂಟು. ಅದಕ್ಕೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಈ ಸಂಗಾಯನದ ನಡಾವಳಿಯನ್ನು ಒಳಗೊಂಡ 'ಕಥಾವತ್ತು' ಎಂಬ 23 ಅಧ್ಯಾಯಗಳ ಗ್ರಂಥವೇ ಪ್ರಕಟವಾಗಿದೆ. ಹೀಗೆ ಥೇರಾವಾದದ ಅಂದರೆ ಮೂಲ ಬುದ್ಧನ ಸಂದೇಶಗಳ ಸಂಗ್ರಹ, ಸಂಪಾದನೆ ಮಾಡುವುದಲ್ಲದೆ ಸಂಘದಲ್ಲಿದ್ದ ಭ್ರಷ್ಟಾಚಾರವನ್ನು ನಿರ್ಮೂಲಗೊಳಿಸಿ ಅದರ ಪಾವಿತ್ರ್ಯವನ್ನು ರಕ್ಷಿಸಿದ ಕೀರ್ತಿ ಅಶೋಕ ಸಾಮ್ರಾಟನಿಗೆ ಸಲ್ಲುತ್ತದೆ. ಮೇಲೆ ಹೇಳಿದಂತೆ ಮಹಾಸಾಂಘಿಕರೆಂದು ಕರೆದುಕೊಂಡ ಒಂದು ಗುಂಪು ತಮ್ಮ ನಿಲುವು ಬದಲಿಸಲು ಒಪ್ಪದೆ ಬೇರ್ಪಡೆಯಾಯಿತು. ಮಹಾಯಾನ ಪಂಥ ಜನ್ಮ ತಾಳಿತು. ಇದು ಮತ್ತೊಂದು ಚಾರಿತ್ರಿಕ ಮೈಲಿಗಲ್ಲು.

ಅಶೋಕನ ಕೈಂಕರ್ಯ ಇಷ್ಟಕ್ಕೇ ನಿಲ್ಲಲಿಲ್ಲ. ಕೂಡಲೇ ರಾಜಾಶ್ರಯದಲ್ಲಿ ಧರ್ಮದ ಅಭಿಯಾನಕ್ಕೆ ಚಾಲನೆ ನೀಡಿದ. ಇದನ್ನೊಂದು ಮಹತ್ತರವಾದ, ಸಾರ್ವಕಾಲಿಕವಾಗಿ ನಿಲ್ಲುವ, ಮನುಷ್ಯ ಕುಲಕ್ಕೆ ನೀಡಿದ ಅನನ್ಯ ಕೊಡುಗೆ ಎಂದು ಹೇಳಬಹುದು. ಧಮ್ಮ ಮತ್ತು ವಿನಯಗಳಲ್ಲಿ ನಿಷ್ಣಾತರಾಗಿದ್ದ ಹನ್ನೆರಡು ಜನ ಭಿಕ್ಕುಗಳನ್ನು ಒಂಭತ್ತು ದೇಶಗಳಿಗೆ ಧಮ್ಮ ಪ್ರಸಾರಕ್ಕಾಗಿ ಕಳುಹಿಸಿದ. ಅವುಗಳು; 1.ಕಾಶ್ಮೀರ ಗಾಂಧಾರ 2.ಮಹಿಷಮಂಡಲ (ಮೈಸೂರು) 3.ಬನವಾಸಿ 4. ಅಪರಾಂತಕ (ಗುಜರಾತ, ಕಚ್ ಮತ್ತು ಸಿಂಧ್ ಪ್ರಾಂತ್ಯಗಳು) 5. ಮಹಾರಾಷ್ಟ್ರ 6. ಯೋನ (ಗ್ರೀಸ್) 7. ಹಿಮಾಲಯ (ಟಿಬೆಟ್) 8. ಸುವರ್ಣಭೂಮಿ (ಮಯನ್ಮಾರ್, ಥೈಲ್ಯಾಂಡ್) ಮತ್ತು 9. ಶ್ರೀಲಂಕಾ. ಬಹಳ ಮುಖ್ಯವಾದ ಸಂಗತಿಯೆಂದರೆ ಈ ಹನ್ನೆರಡು ಜನರಲ್ಲಿ ತನ್ನ ಮಗ ಮಹೇಂದ ಮತ್ತು ಮಗಳು ಸಂಘಮಿತ್ರೆಯೂ ಸೇರಿದ್ದರು. ಬುದ್ಧ ತನ್ನ ಏಕೈಕ ಪುತ್ರ ರಾಹುಲನಿಗೆ ಭಿಕ್ಕು ದೀಕ್ಷೆ ನೀಡಿದಾಗ ಅರಹಂತ ಪದವಿಗೇರಿದ್ದರು. ಆದರೆ ಅಶೋಕ ರಾಜನಾಗಿ ರಾಜಸತ್ತೆಯ ಉತ್ತರಾಧಿಕಾರದ ಪ್ರಶ್ನೆಯನ್ನು ಬದಿಗೊತ್ತಿ ತನ್ನ ಇಬ್ಬರು ಮಕ್ಕಳಿಗೂ ಭಿಕ್ಕು ದೀಕ್ಷೆಯನ್ನು ನೀಡಿದ್ದು ತ್ಯಾಗದ ಔತ್ತುಂಗವಲ್ಲದೆ ಬೇರೆ ದಾರಿಯಿಲ್ಲ.

ಗಮನಿಸಬೇಕಾದ ಅಂಶವೆಂದರೆ ದಕ್ಷಿಣ ಏಷ್ಯಾದ ದೇಶಗಳಲ್ಲಿ ಮೂಲ ಥೇರಾವಾದ ಅಥವಾ ಹೀನಯಾನ ಮತ್ತಷ್ಟು ಹರಡಿ ಗಟ್ಟಿಯಾಗಿ ನೆಲೆನಿಂತಿತು. ಮಹಾಸಾಂಘಿಕರು ಹುಟ್ಟುಹಾಕಿದ ಮಹಾಯಾನ ಉತ್ತರ ಮತ್ತು ಈಶಾನ್ಯ ರಾಷ್ಟ್ರಗಳಲ್ಲಿ (ಚೀನಾ, ಮಂಗೋಲಿಯಾ, ಜಪಾನ್ ಇತ್ಯಾದಿ) ಬೃಹತ್ತಾಗಿ ಬೆಳೆಯಿತು. ಕಾರಣವಿಷ್ಟೆ, ಮಹಾಯಾನಿಗಳು ತಮ್ಮ ವೈಚಾರಿಕ ಉದಾರತೆಯಿಂದಾಗಿ ಸ್ಥಳೀಯ ಸಂಸ್ಕೃತಿಯೊಂದಿಗೆ ಮಿಳಿತಗೊಂಡರು. ಬುದ್ಧನ ಧರ್ಮ ಬೆಳೆದು ಶಾಂತಿಯ ಧರ್ಮವಾಗಿ ಪ್ರಚುರಪಡೆಯಿತು. ಆಶ್ಚರ್ಯವೆಂದರೆ ತಂತ್ರವಿದ್ಯೆಯ ವಾಮಾಚಾರಗಳನ್ನು ಒಪ್ಪಿರುವ ಟಿಬೆಟ್‌ನಂತಹ ಪ್ರಾಂತ್ಯದಿಂದ ಒಬ್ಬ ದಲೈಲಾಮ ಹುಟ್ಟಬಲ್ಲರು, ಚತುರಾರ್ಯ ಸತ್ಯಗಳನ್ನು, ಅಷ್ಟಾಂಗ ಮಾರ್ಗಗಳನ್ನು ಪರಿಣಾಮಕಾರಿಯಾಗಿ ಹೇಳುವ ಶಾಂತಿಯ ವಕ್ತಾರನಾಗಬಲ್ಲರು. ಇದೇ ಧಮ್ಮದ ಶಕ್ತಿ.

■ ತೋಪ

## ಮಾತೇ ಮುತ್ತು

★ ಸೂರ್ಯನಂತೆ ಪ್ರಕಾಶಿಸಬೇಕಿದ್ದರೆ ಮೊದಲು ಸೂರ್ಯನಂತೆ ನಿಮ್ಮನ್ನು ನೀವೇ ಸುಟ್ಟುಕೊಳ್ಳಿ.

—ಎ.ಪಿ.ಜೆ.ಕಲಾಂ

★ ನಿಮ್ಮ ವಯಸ್ಸನ್ನು ಗೆಳೆಯರಿಂದ ಅಳೆಯಿರಿ, ವರ್ಷದಿಂದಲ್ಲ. ಜೀವನವನ್ನು ಮುಗುಳ್ನಗೆಯಿಂದ ಅಳೆಯಿರಿ, ಕಣ್ಣೀರಿನಿಂದಲ್ಲ.

—ಜಾನ್ ಲಿನ್ನನ್

★ ವ್ಯಕ್ತಿಯ ಚಾರಿತ್ರ್ಯವನ್ನು ಅವನ ಗೆಳೆಯರನ್ನು ನೋಡಿ ಅಳೆಯಿರಿ.

—ಜಪಾನಿ ಗಾದೆ

★ ಸುತ್ತ ಬೇಲಿ ಕಟ್ಟಿದರೆ ನಿಮ್ಮ ರಕ್ಷಣೆ ಸಾಧ್ಯವಿಲ್ಲ; ಸುತ್ತ ಗೆಳೆಯರಿದ್ದರೆ ಸಾಧ್ಯ.

—ಜೆಕ್ ಗಾದೆ

★ ಬದುಕುವುದು ಅತ್ಯಂತ ಅಪರೂಪದ ಕೆಲಸ. ಬಹುತೇಕ ಜನರು ಅಸ್ತಿತ್ವ ಹೊಂದಿರುತ್ತಾರೆ, ಅಷ್ಟೇ!

— ಆಸ್ಕರ್ ವೈಲ್ಡ್

★ ಜೀವನವೆಂದರೆ ನಿಮ್ಮನ್ನು ನೀವು ಕಂಡುಕೊಳ್ಳುವುದಲ್ಲ; ನಿಮ್ಮನ್ನು ನೀವು ಸೃಷ್ಟಿಸಿಕೊಳ್ಳುವುದು.

—ಜಾರ್ಜ್ ಬರ್ನಾರ್ಡ್ ಷಾ

★ ಸಂತೋಷದಿಂದ ಗುಣ ಪಡಿಸಲಾಗದ್ದನ್ನು ಯಾವ ಔಷಧಿಯಿಂದಲೂ ಗುಣ ಪಡಿಸಲು ಆಗುವುದಿಲ್ಲ.

—ಗ್ಯಾಬ್ರಿಯಲ್ ಮಾರ್ಕ್ವೆಝ್

★ ಪರಿಪೂರ್ಣತೆಯನ್ನು ಸಾಧಿಸಲಾಗದು. ಆದರೆ ಪರಿಪೂರ್ಣತೆಯನ್ನು ಬೆನ್ನು ಹತ್ತಿದರೆ ಅತ್ಯುತ್ತಮವಾದುದನ್ನು ಸಾಧಿಸಬಹುದು.

—ವಿನ್ಸ್ ಲೊಂಬಾರ್ಡಿ

★ ಇನ್ನೊಬ್ಬರನ್ನು ಸಂತೋಷ ಪಡಿಸುವುದೇ ನಿಮ್ಮನ್ನು ನೀವು ಸಂತೋಷಗೊಳಿಸಲು ಇರುವ ಸುಲಭ ಮಾರ್ಗ.

—ಮಾರ್ಕ್ ಟ್ವೈನ್

★ ಸಾವಿರಾರು ಟೊಳ್ಳು ಶಬ್ದಗಳಿಗಿಂತ ಶಾಂತಿಯನ್ನು ಉಂಟು ಮಾಡುವ ಒಂದೇ ಒಂದು ಶಬ್ದ ಸಾಕು.

—ಗೌತಮ ಬುದ್ಧ